3. ಈ ಹರಾಜಿನ ಚಡದರಖಾಸ್ತು ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರು ಮಾಡಲ್ಪಡುವ ಪರಯತಂರ ಖಾಯಮಾದ್ದಾಗಿ ತಿಳಿದುಕೊಳ್ಳಕೂಡದು.

4. ಈ ಇಜಾರೆಯು ಸ॥ 1890ನೇ ಇಸವಿ ಮಾರ್ಚಿ 31ರ ವರಿಗೆ ಜಾರಿಯಲ್ಲಿರತಕ್ಕದ್ದು.

5. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಕೀಕಡಾ 25 ರೂಪಾಯಿ ಯಂತೆ ಆಗುವ ಮೊಬಲಗನ್ನ ಡಿಪಾಜಿಟ್ಟು ಇಡಬೇಕಲ್ಲದೆ ಹರಾಜ್ ಮಂಜೂರು ಮಾಡಲ್ಪಟ್ಟ ಸಂಗತಿ ಡೆಪ್ಯುಟಿ ಕಮ್ಮಿಷನರವರಿಂದ ಕ್ರಯದಾರನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 7 ದಿವಸದ ಒಳಗಾಗಿ ಕ್ರಯದ ಬಟ್ಟು ಮೊಬಲಗಿನ ಮೇಲೆ ರೂಪಾಯಿ ಬಂದಕ್ಕೆ ಒಂದಾಣೆಯಂತೆ ಆಗುವ ಲೋಕಲ್ ಸೆಸ್ ದೇಬೀಲ್ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ, ಹಾಂಗೆ ಡಿಪಾಜಿಟ್ ಇಟ್ಟ ಮೊಬಲಗು ಸರ್ಕಾರಕ್ಕೆ ಬಂಡವಾಗಿ ತೆಗದುಕೊಳ್ಳಲ್ಪಡುವದು, ಹಾಂಗೆ ಡಿಪಾಜಿಟ್ ಮೊಬಲಗು ಹಾಜರ್ಮಾಡದಿದ್ದರೂ ಅಥವಾ ಬಾಕಿ ಕ್ರಯದ ಮೊಬಲಗು ಪಾವತಿ ಮಾಡದಿದ್ದರೂ, ಹಕ್ಕುದಾರಿಯು ಅವಲ್ ಕ್ರಯದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ಳಪಟ್ಟು ಪುನಹ ವಿಕ್ರಯಿಸಲ್ಪಡುವದು.

6. ಹರಾಜಿನ ಷರತ್ತುಗಳು.

ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳನ್ನು ತೆಗದುಕೊಳ್ಳಬೇಕಾದರೆ ಹಿಡುವಳಿದಾರನ ಸಮ್ಮತಿಯನ್ನ ಪಡಿಯಬೇಕು. ಜಮೀನು ಹಿಡುವಳಿದಾರನು ತನ್ನ ಕಲ್ಲುಗಳನ್ನು ಸ್ವಂತ ಪ್ರಯೋಜನಕ್ಕಾಗಿ ತೆಗದುಕೊಳ್ಳಲೂ ಕೂಡದು ಇಜಾರೆದಾರನಿಗೆ ಮಾರಬೇಕೇ ಹೊರತು ಇತರ ಜನಗಳಿಗೆ ಮಾರಲೂಕೂಡದು.

(b) ಇಜಾರೆದಾರನು ಹುಲ್ಲುಬನ್ನಿ ಇಜಾರೆದಾರರ ಚರಾವು ಹಕ್ಕಿನಲ್ಲಿ ಪ್ರವೇಶಿಸಕೂಡದು.

(c) ಬಂಜರು ಜಮೀನುಗಳ ಸಾಗುವಳಿ ಬಗ್ಗೆ ದರಖಾಸ್ತು ಬಂದಲ್ಲಿ ಆ ಪ್ರಕಾರ ಸಾಗುವಳಿಗೆ ಕೊಟ್ಟು ಬಿಡುವದಕ್ಕೆ ಕುರಂಗವ ಇಜಾರೆದಾರನು ಅಡ್ಡಿ ಹೇಳಕೂಡದು. ಅಂಥಾ ಜಮೀನುಗಳಲ್ಲಿ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳತಕ್ಕ ಹಕ್ಕು ಮಾತ್ರ ಇಜಾರೆದಾರನಿಗೆ ಉಳಿದಿರುತ್ತೆ.

(d) ಇಜಾರೆದಾರನು ಕಲ್ಲುಗಳಿಗೋಸ್ಕರ ಜರ್ಮೀಗಳನ್ನು ಅಗಿಯಕೂಡದು ಒಂದು ವೇಳೆ ಹಾಗೆ ಆಗದಲ್ಲಿ ಆ ಗುಂಡಿಗಳನ್ನ ತಕ್ಷಣ ಮುಚ್ಚಿ ಬಿಟ್ಟು ಸಾಗುವಳಿಗೆ ಜರ್ಮೀ ಲಾಯಕ್ಕಾ ಇರುವ ಹಾಗೆ ಮಾಡಬೇಕು.

ಹಾಸನ ಡಿಸ್ಟ್ರಿಕ್ಟು.

ಫಾರೆಸ್ಟ್ ಇಲಾಖೆ.

ತಾರೀಖು 5ನೇ ಮಾರ್ಚಿ 1889.

ಹಾಸನ ಡಿಸ್ಟ್ರಿಕ್ಟು ಮಂಜರಾಬಾದ್ ತಾಲ್ಲೂಕಿನಲ್ಲಿರತಕ್ಕ ಇದರಡಿ ಕಂಡ ಫಾಟ್ ಫಾರೆಸ್ಟುಗಳಲ್ಲಿ ವುತ್ಪತ್ತಿ ಆಗುವ ಇಲಾಚಿ ಮತ್ತು ಮೆಣಸನ್ನು ಗೇಣೀ ಮೂಲಕ ಹತ್ತು ವರುಷಗಳ ಕಾಲಕ್ಕೆ 1889—90ನೇ ಸರ್ಕಾರ ಸಾಲ್ ಲಾಗಾಯತು 1898—99ನೇ ಸರ್ಕಾರ ಸಾಲಿನ ವರಿಗೆ ಜಮಾಯಿಸುವ ಹಕ್ಕುದಾರಿ ಬಗ್ಗೆ ದರಖಾಸ್ತುಗಳು ಇದರ ದೆಸೆಯಿಂದ ಅಪೇಕ್ಷಿಸಲ್ಪಡುತವೆ.

1 ಬಿಸಲೆಘಾಟಿ ಫಾರೆಸ್ಟು.
2 ಕೆಂಪು ಹೊಳೆ ಮತ್ತು ಕೆಂಚನ ಕುಮರಿ ಫಾರೆಸ್ಟು.

2. ದರಖಾಸ್ತುಗಳು, "ಫಾಟಿಫಾರೆಸ್ಟುಗಳ ಯಿಲಾಚಿ ಮತ್ತು ಮೆಣಸಿನ ಗೇಣೀಗೋಸ್ಕರ ದರಖಾಸ್ತುಗಳು" ಯಂಬದಾಗಿ ಮೇಲ್‌ವಿಳಾಸ ಬರಿಯಲ್ಪಟ್ಟು ಹಾಸನದ ಮೊಕ್ಕಾಂ ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರಿಗೆ 1889ನೇ ಮಾರ್ಚಿ 20ನೇ ಮಕ್ಕಾಂ ಯಾ ಅದಕ್ಕೆ ಮುಂಚಿತವಾಗಿ ತಲವುವಂತೆ ಕಳುಹಿಸಲ್ಪಡತಕ್ಕದ್ದು. ದರಖಾಸ್ತುಗಳು, 1889ನೇ ಇಸವಿ ಮಾರ್ಚಿ 20ನೇ ಮಕ್ಕಾಮಿನಲ್ಲಿ ಹಾಜರಿರಬಹುದಾದ ದರಖಾಸ್ತುದಾರರ ರೂಬರೂಬ್ ಡೆಪ್ಯುಟಿ ಕಮ್ಮಿಷನರವರ ಆಫಿಸಿನಲ್ಲಿ ಸದರೀಯವರಿಂದಲಾಗಲಿ ಅಥವಾ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರಿಂದಲಾಗಲಿ ಆಫಿಸ್ ಹೊತ್ತಿನಲ್ಲಿ ಖುಲ್ಲಾ ಮಾಡಲ್ಪಡುವವು. ಸದರೀ ದರಖಾಸ್ತುಗಳ ಆಕ್ಷೇರು ವಿಲೇವಾರಿಯು ನ್ಯೆಸೂರ್ ದೇಶದ ಫಾರೆಸ್ಟ್ ವ ಪ್ಲಾಂಟೇಷ್ಣಗಳ ಇನಸ್ಪೆಕ್ಟರ್ ಜನರಲ್‌ಯವರಿಗೆ ಸೇರಿರುತ್ತೆ—ಸದರೀ ಯಾವ ದರಖಾಸ್ತನ್ನಾಗಲಿ ಯಾ ತಮ್ಮಾ ದರಖಾಸ್ತುಗಳನ್ನಾಗಲಿ ಯಾವ ಸಬಬೂ ತಿಳಿಸದೇಯೇ ತಿರಸ್ಕರಿಸುವ ಪೂರಾ ಸ್ವಾತಂತ್ರ್ಯವನ್ನು ತಮ್ಮಲ್ಲಿಯೇ ವುಳಕೊಂಡಿರುತ್ತಾರೆ.

3. ಪ್ರತಿ ದರಖಾಸ್ತಿನ ಸಂಗಡಲೂ ನಗದಾಗಿಯಾಗಲಿ ಕರೆನ್ಸೀ ನೋಟಿನ ಮೂಲಕವಾಗಿಯಾಗಲಿ ಒಂದು ನೂರು ರೂಪಾಯಿಗಳ ಕೇವಣಿಯನ್ನು ಕಳುಹಿಸತಕ್ಕದ್ದು. ತಿರಸ್ಕರಿಸಲ್ಪಡುವ ದರಖಾಸ್ತುದಾರರಿಂದ ಹಾಜರ್ಮಾಡಲ್ಪಟ್ಟ ಕೇವಣಿಗಳು ಆಯಾ ಜನಗಳಿಗೆ ಕ್ರಮವಾಗಿ ವಾಪಸು ಮಾಡಲ್ಪಡುವವು.

4. ಯಾವ ದರಖಾಸ್ತು ಫಾರೆಸ್ಟು ವ ಪ್ಲಾಂಟೇಷ್ಣಗಳ ಇನ್‌ಸ್ಪೆಕ್ಟರ್ ಜನರಲ್‌ಯವರಿಂದ ಆಕ್ಷೇರಾಗಿ ಮಂಜೂರ್ಮಾಡಲ್ಪಡುತ್ತದೆಯೋ ಅಂಥಾ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ಸಂಗತಿ ಅವನಿಗೆ ತಿಳಿಸಲ್ಪಟ್ಟ 15 ದಿವಸಗಳೊಳಗಾಗಿ ನಗದಾಗಿಯಾದರೂ ಅಥವಾ ಕರೆನ್ಸೀ ನೋಟುಗಳ ಮೂಲಕವಾಗಿಯಾದರೂ ತಾನು ಮೊದಲೇ ಹಾಜರ್ಮಾಡಿರುವ ಡಿಪಾಜಿಟ್ ಮೊಬಲಗು ದೇಬೀಲ್ ಗುತ್ತಿಗೇ ಮೊಬಲಗಿನ, ಹತ್ತರಲ್ಲಿ ಒಂದು ಭಾಗಕ್ಕೆ ಸಮನಾಗುವಂತೆ ಕೇವಣೀ ಮೊಬಲಗನ್ನು ಡೆಪ್ಯುಟಿ ಕಮ್ಮಿಷನರವರಲ್ಲಿ ಹಾಜರ್ಮಾಡಿ ತಕ್ಕ ಪಾವಾಕಾಗದದಲ್ಲಿ ಮುಂದೆ ವುದಹರಿಸಲ್ಪಟ್ಟ ಷರತ್ತುಗಳಿಗೆ ಳಪಟ್ಟು ಒಪ್ಪಂದನಾಮೆ ಕರಾರು ಬರದು ಕೊಡತಕ್ಕದ್ದು.

ಮತ್ತು ಆತನು ಸದರೀ ಕರಾರಿಗೆ ರುಜು ಮಾಡುವದಕ್ಕೆ ತಪ್ಪಿದರೆ ಯಾ ತಿರಸ್ಕರಿಸಿದರೆ ಅಥವಾ ಆವಶ್ಯಕವಾದ ಕೇವಣಿಯನ್ನು ಹಾಜರಮಾಡದಿದ್ದರೆ ಮೊದಲೇ ಯಿಜೋಣಾದ ಡಿಪಾಜಿಟ್ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದಲ್ಲದೆ ಗೇಣಿಯು ಅನ್ಯಥ ವಿಲಾವಾಡಲ್ಪಡುವದು.

5. ಹಾಲಿ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುವ ಗೇಣಿಯು ಇದರಿಂ ಕಂಡ ಪ್ರತ್ತುಗಳಿಗೆ ವಳಪಟ್ಟಿರತಕ್ಕದ್ದು.

I. ಗೇಣೀ ಮೊಬಲಗು ಹತ್ತು ಸಮನಾದ ಸಾಲಿಯಾನಾ ಖಿಸ್ತುಗಳಾಗಿ ಪ್ರತಿ ಆಗಸ್ಟು ತಿಂಗಳಲ್ಲಿ ಅಂದರೆ ಆಯಾ ಕಾಲದ ಫಸಲನ್ನು ಜಮಾಯಿಸುವದಕ್ಕೆ ಮುಂಚಿತವಾಗಿ ಸರ್ಕಾರಕ್ಕೆ ಪಾವತಿ ಮಾಡಲ್ಪಡತಕ್ಕದ್ದು. ಗೇಣೀದಾರನು ಇದಕ್ಕೆ ತಪ್ಪಿದರೆ ಗೇಣಿಯು ರದ್ದು ಮಾಡಲ್ಪಟ್ಟು ಗೇಣಿಗೆ ಕೊಡಲ್ಪಟ್ಟ ಘಾರೆಸ್ಟುಗಳು ಸರ್ಕಾರ ಸ್ವಾಧೀನತೆಗೆ ತೆಗದು ಕೊಳ್ಳಲ್ಪಡುವದು ಮತ್ತು ಗೇಣೀದಾರನಿಂದ ಯಿಡಲ್ಪಟ್ಟ ಕೇವಣಿಯು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

II. ಗೇಣೀವಾಯಿದೆಯು ಮುಗಿದ ತರುವಾಯ ಗೇಣಿಯನ್ನು ಪುನ್ಯೂ ಯಾನೇ ಪುನಹ ಪಡೆಯುವ ಬಗ್ಯೆ ಸರ್ಕಾರದವರಿಗೆ ಯಿಷ್ಟವಾಗಿ ತೋರಿಬರುವ ಪ್ರತ್ತುಗಳ ಮೇಲೆ ಮತ್ತು ಹಾಂಗೆ ಗೊತ್ತುಮಾಡಲ್ಪಡಬಹುದಾದ ಕಾಲಕ್ಕೆ ಗೇಣೀದಾರನಿಗೆ ಅವಕಾಶ ಕೊಡಲ್ಪಡಬಹುದು.

III. ಗೇಣಿಯು, ಇಲಾಚಿ ಮತ್ತು ಮೆಣಸನ್ನು ಜಮಾಯಿಸುವದಕ್ಕೂ ಮತ್ತು ಅವುಗಳನ್ನು ಸಾಗುವಳಿ ಮಾಡುವದಕ್ಕೂ ಮಾತ್ರವೇ ಆಗಿರುವದರಿಂದ ಇನ್ಯಾವ ತರಹೆಯ ಇತರ ಫಸಲಾಗಲಿ ಗೇಣಿಗೆ ಪಡದಿರುವ ಘಾರೆಸ್ಟಿನಲ್ಲಿ ಸಾಗುವಳಿ ಮಾಡಲ್ಪಡಕೂಡದು, ಪರಂತು, ಇಲಾಚೀ ಗಿಡಗಳಿಗೂ ಮೆಣಸಿನ ಬಳ್ಳಿಗಳಿಗೂ ನೆರಳಿಗೋಸ್ಕರ ಅವಶ್ಯಕವಾದ ಬಾಳೆ, ಪರಳು ಯಾ ಇತರ ಮರಗಳು ಬೆಳಸಕೂಡದೆಂದು ಅರ್ಥವಾಗತಕ್ಕದ್ದಲ್ಲ.

IV. ಘಾರೆಸ್ಟ್ ಆಫೀಸರರ ಬರಹಮೂಲಕವಾದ ಅಪ್ಪಣೆ ವಿನಹ ಯಾವ ವಿಧವಾದ ಮರವೇ ಆಗಲಿ ಕಡಿಯಲ್ಪಡಕೂಡದು ಮತ್ತು ಗೇಣೀಗೆ ಕೊಡಲ್ಪಟ್ಟ ಘಾರೆಸ್ಟುಗಳಿಂದ ಯಾವ ಇಲಾಚೀ ಗಿಡಗಳಾಗಲಿ ಮೆಣಸಿನ ಬಳ್ಳಿಯಾಗಲಿ ಯಾವ ಸಂದರ್ಭಗಳಲ್ಲೂ ಆಗೆದು ಆಚೆಗೆ ಸಾಗಿಸಲ್ಪಡಕೂಡದು, ಇಲಾಚೀ ಗಿಡಗಳ ಮತ್ತು ಮೆಣಸಿನ ಬಳ್ಳಿಗಳ ಬೆಳವಣಿಗೆ ಯಾ ಅಭಿವೃದ್ಧಿಗೋಸ್ಕರವೇ ಜಮೀನನ್ನು ಬೈಲ್‌ಮಾಡುವದಕ್ಕಾಗಿ ಯಾವದಾದರೂ ಮರಗಳನ್ನು ಕತರಾಯಿಸುವದು ಅವಶ್ಯಕವಾದಾಗ ಗೇಣೀದಾರನು ಘಾರೆಸ್ಟು ಆಫಿಸರರಿಗೆ ಬರದುಕೊಳ್ಳತಕ್ಕದ್ದು ಅವರು ಕತರಾಯಿಸಲ್ಪಡಬೇಕಾದ ಮರಗಳನ್ನು ಗುರ್ತುಮಾಡತಕ್ಕದ್ದು ಮತ್ತು ಹಾಂಗೆ ಕತರಾಯಿಸಲ್ಪಟ್ಟ ಮರಗಳು ಘಾರೆಸ್ಟು ಇಲಾಖೆಯವರಿಂದ ಸ್ವಾಧೀನಕ್ಕೆ ತೆಗದುಕೊಳ್ಳಲ್ಪಡತಕ್ಕದ್ದು ಗೇಣೀದಾರನು ಸದರೀ ಮರಗಳ ಪೈಕಿ ಯಾವದನ್ನಾದರೂ ಅಪೇಕ್ಷಿಸಿದರೆ ಇದರಡಿಕಂಡ ಗೊತ್ತುವಳಿಯ ಸೀನಿಯರೇಟ್ ಯಾನೇ ತೀರ್ವೆದರಗಳು ಯಾ ಡಿಪ್ಯೂಟಿ ಕಮ್ಮಿಷನರವರ ಯುಕ್ತಾನುಸಾರ ಯಿನ್ನೂ ಕಮ್ಮಿ ಆದ ದರಗಳನ್ನು ಪಾವತಿವಾಡಲ್ಪಟ್ಟು ತರುವಾಯ ಕೊಡಲ್ಪಡತಕ್ಕದ್ದು.

ಪೂ	ದರ ಮರ 1ಕ್ಕೆ	ರೂಪಾಯಿ	15	ಹೆಬಸಿ	ದರ ಮರ 1ಕ್ಕೆ	ರೂಪಾಯಿ	6
ಹೆಸವ	ಡಿಟೋ	,,	10	ಯಬನಿ	ಡಿಟೋ	,,	10
ಈರೇಮರ	ಡಿಟೋ	,,	8	ಇತರ ತಮಾಂ ತರಹೆಯ ಮರ ಅಡಿ		,,	3½
ನಂದಿ	ಡಿಟೋ	,,	8	ಬೊಂಬುಗಳು 1,000ಕ್ಕೆ		,,	10

V. ಗೇಣೀದಾರನು ಇಲಾಚಿ ಮತ್ತು ಮೆಣಸು ವಿನಹ ಇತರ ಯಾವ ಘಾರೆಸ್ಟು ಹುಟ್ಟುವಳಿಗಾಗಲಿ ಹಕ್ಕುದಾರನಾಗಿರುವದಿಲ್ಲ ಮತ್ತು ಘಾರೆಸ್ಟುಗಳಲ್ಲಿ ಯಿರತಕ್ಕ ರಸ್ತೆಗಳನ್ನು ಆವರಣಿಸುವದಕ್ಕಾಗಲಿ ನಿರೋಧಪಡಿಸುವದಕ್ಕಾಗಲಿ ಯಾ ಮತ್ಯಾವ ವಿಧವಾಗಿಯಾದರೂ ಆಟಂಕಪಡಿಸುವದಕ್ಕಾಗಲಿ ಗೇಣೀದಾರಗೆ ಸ್ವತಂತ್ರ ವಿರುವದಿಲ್ಲ ಮತ್ತು ಗವರ್ಮೆಂಟಿನವರು ಅಂಥಾ ತಮಾಂ ಘಾರೆಸ್ಟುಗಳಲ್ಲಿ ಯಾ ಯಲ್ಲಾ ತರಹೆಯ ಪೂರ್ತಿಯಾದ ಹಕ್ಕುದಾರಿಗಳನ್ನು ತಾವೇ ಯಿಟ್ಟುಕೊಂಡಿರುತ್ತಾರೆ.

VI. ಈ ರೂಲ್ಸ್ ಅನುಸರಿಸಿ ಪಡದ ಇಲಾಚಿ ವ ಮೆಣಸಿನ ಗೇಣಿಯು ಗೇಣೀದಾರನ ಇಷ್ಟಾನುಸಾರ ವಿಕ್ರಯಿಸಲ್ಪಡಬಹುದು, ಯಾ ಅನ್ಯಥಾ ಪರಭಾರೆ ಮಾಡಲ್ಪಡಬಹುದು, ಪರಂತು, ಅಂಥಾ ಪರಭಾರೆಯ ವರ್ತಮಾನವು ಡಿಪ್ಯೂಟಿ ಕಮ್ಮಿಷನರವರಿಗೆ ಅವರ ಆಫಿಸಿನಲ್ಲಿ ದಾಖಲೆ ಬಗ್ಯಾಗಿ ಕೊಡಲ್ಪಡತಕ್ಕದ್ದು ಮತ್ತು ಗೇಣಿ ಪರಭಾರೆಯು ರಜಿಸ್ಟ್ರೇಷನ್ ಆಕ್ಟಿನ ನಿಯಮಗಳನ್ನನುಸರಿಸಿ ಕ್ರಮವಾಗಿ ರಜಿಸ್ಟರ್ ಮಾಡತಕ್ಕದ್ದು.

ತಾರೀಖು 12ನೇ ಫಿಬ್ರವರಿ 1889.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,— ಹಾಸನ ಡಿಸ್ಟ್ರಿಕ್ಟು ಬೇಲೂರು ತಾಲ್ಲೂಕಿನ ಈ ಕೆಳಗೆ ನಮೂದಾಗಲ್ಪಡುವ ಜಮೀನ್ ಕಾಫೀ ಸಾಗುವಳಿಗೋಸ್ಕರ ಇದರ ಕೆಳಗಿನ ಸ್ಟೇಟ್‌ಮೆಂಟಿನ ಪ್ರಕಾರ ಕಾಲಂನಲ್ಲಿ ನಮೂದಾಗುವ ಕಾರ್ಯಮು ಮತ್ತು ಸ್ಥಳದಲ್ಲಿ ಬೇಲೂರು ತಾಲ್ಲೂಕು ಅಮಲ್ದಾರ್‌ರವರ ರೂಬರೂ ಹಾಸನ ಡಿಸ್ಟ್ರಿಕ್ಟು ಡಿಪ್ಯೂಟಿ ಕಮ್ಮಿಷನರ ಸಾಹೆಬರವರ ಮಂಜೂರಾತಿಗೆ ಪೊಳಪಟ್ಟು ಹರಾಜ್ ಮಾಡಿಸಲ್ಪಡುವದು.

2. ಈ ಹರಾಜು ಬಹಿರಂಗವಾಗಿ ದಸ್ತೂರಿ ಪ್ರಕಾರ ಅನುಸರಿಸಿ ಗೊತ್ತಾಗಲ್ಪಟ್ಟು ಎಕರೆಗೆ 10 ರೂಪಾಯಿಗಳ ಮೇಲೆ ಜಾಸ್ತಿ ದರಖಾಸ್ತು ಮಾಡುವವರ ಹೆಸರಿಗೆ ಬೈದ್ ಮಾಡಲ್ಪಡುವದು. ದರಖಾಸ್ತುದಾರನಿಂದ ಹಾಜರ್ಮಾಡಲ್ಪಟ್ಟು ಗೊತ್ತಾಗಲ್ಪಟ್ಟ ಬಾಕಿಯು

ನಾಳ್ಕರಲ್ಲಿ ಬಂದುಭೂಗದೆ ಡಿಪಾಜಿಟ್ ಪಣವು ದರಖಾಸ್ತುದಾರನ ಹೆಸರಿಗೆ ಹರಾಜು ನಿಂತಪಕ್ಷ ಆವನು ಈ ನೋಟಿಸ್ 4ನೇ ಕ್ಲಾಜ್ ಮೇರೆಗೆ ಕೊಡಬೇಕಾದ ಕೀಕಡಾ 25 ರೂಪಾಯಿ ಹರಾಜ್ ಪಣದ ಡಿಪಾಜಿಟ್ಟಿಗೆ ವಜಾ ಮಾಡಲ್ಪಡುವದು ಮತ್ತು ಇತರರು ಜಡೆ ದರಖಾಸ್ತು ಮಾಡಿ ಅವರಿಗೇನೇ ನಿಂತಪಕ್ಷ ದರಖಾಸ್ತುದಾರನ ಕೀವಣಿಯು ವಾಪಸ್ ಮಾಡಲ್ಪಡುವದು.

3. ಗೊತ್ತಾಗಲ್ಪಟ್ಟ ಖರೀದಿಯ ಸರ್ವೇ ಖರ್ಚನ್ನು ಅಡಗಿಸಿಕೊಂಡು ಯಿರುತ್ತಲ್ಲದೆ ಸಂದಲ್ ವಿನಹ ವುಳಸಿಕೊಳ್ಳಲ್ಪಟ್ಟ ಜಾತಿ ಯಲ್ಲಮರಗಳ ಗವರ್ನ್‌ಮೆಂಟ್ ಹಕ್ಕನ್ನೂ ಕೇರಿಸಿಕೊಂಡು ಯಿರುತ್ತೆ. ಸಂದಲ್ ಯಾವಾಗ್ಯೂ ಸರ್ಕಾರದ ಹಕ್ಕಿನದೇ ಆಗಿ ಯಿರುತ್ತೆ.

4. ಜಡ ದರಖಾಸ್ತುದಾರನು ಹರಾಜ್ ಖೈದಾದ ವಡನೆಯೇ ಕೀಕಡಾ 25 ರೂಪಾಯಿಗಳ ಮೇರೆ ಕೊಡಬೇಕಲ್ಲದೆ ಬಾಕೀ ಹಣವನ್ನೆ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ ಹರಾಜಾದ ತಾರೀಖು ಲಾಗಾಯತು 15ನೇ ತಾರೀಖಿನ ದಿವಸದ ಸೂರ್ಯಾಸ್ತಮಾನದೊಳಗೆ ಕೊಡಬೇಕು. ಹಾಗೆ ಕೊಡದೆ ತಪ್ಪಿದಲ್ಲಿ ಡಿಪಾಜಿಟ್ ಯಿಟ್ಟ ಪೊಬಲಗು ದಂಡವಾಗಿ ತೆಗದುಕೊಳ್ಳುವದಲ್ಲದೆ ಹರಾಜಿನಲ್ಲಿ ತೆಗದುಕೊಂಡವನ ಅವಗುಣಕ್ಕಾಗಿ ಪುನ್ಹಃ ಹರಾಜ್ ಮಾಡಿಸಲ್ಪಡುವದು 2ನೇ ಹರಾಜಿನಲ್ಲಿ ಕಮ್ಮಿ ಆಗುವ ಹಣವನ್ನು ಮೊದಲ್ ಹರಾಜ್ ದಾರನಿಂದ ವಸೂಲ್ ಮಾಡಲ್ಪಡುತ್ತೆ.

5. ಈ ರೂಲ್ಸ್ ಅನುಸರಿಸಿ ಹರಾಜು ಮಾಡಲ್ಪಟ್ಟ ಜಮೀನು ಮೂರುವರುಷ ಮುಫತ್ತಾಗಿಯೂ ನಂತರ ಯರಡು ವರುಷ ಅರ್ಧ ಕಂದಾಯಕ್ಕೂ ಆರನೇ ವರುಷದಿಂದ ಪೂರಾ ಕಂದಾಯಕ್ಕೂ ಕೊಡಲ್ಪಡುವದು, ಈ ರಿಯಾಯಿತಿಯನ್ನು ಕೋರಿಸುವದಕ್ಕೆ ಮುಂಚೆ ಜಡ ದರಖಾಸ್ತುದಾರನು ಸದರೀ ಜಮೀನಿನಲ್ಲಿ ಯಿರತಕ್ಕ ಸಾಗುವಳೀ ಲಾಯಬ್ ಪ್ರದೇಶವನ್ನು ನಿಜವಾಗಿಯೂ ಗಿಡಹಾಕುವದಕ್ಕೆ ಯತ್ನಪಡದೆ ಅಡವಿಯನ್ನು ತೆಗದು ಮರಗಳನ್ನು ಕಡಿದು ರಾಜೀನಾಮೆ ಕೊಟ್ಟಲ್ಲಿ ಆದರೆ ಮೊದಲ್ ವರುಷದ ಲಾಗಾಯತು ಪೂರಾ ಕಂದಾಯವನ್ನು ಸರಕಾರಕ್ಕೆ ಕೊಡಲು ಬದ್ಧನಾಗಿ ಮುಚ್ಚಳಿಕೆ ಬರದುಕೊಡಬೇಕು.

ಸರ್ವೆ ನಂಬರ್.	ದರಖಾಸ್ತುದಾರನ ಹೆಸರು.	ಹೆಸರು ಮತ್ತು ಜಮೀನು ಯಿರುವ ಸ್ಥಳ.	ಹದ್ದುಬಸ್ತು.	ದರಖಾಸ್ತು ಮಾಡಿರುವ ಜಮೀನಿನ ವಿಸ್ತೀರ್ಣ ಮತ್ತು ಕಂದಾಯ.			ಷರಾ.
82	ಕೆಳಪಡಪೋಯಿನ ಅರೇಹಳ್ಳೀ ಹೋಬಳಿ ಬರಗೂರು ಗ್ರಾಮದಲ್ಲಿರುವ ಕಾಫೀ ಜಮೀನು	1 ಉತ್ತರಕ್ಕೆ ನಂಬರ್ 84 ನೇ ಬೊಳ್ಯಾಂಡ್ ಸಾಹೆಬರ ತೋಪಿನ 1 ಪೂರ್ವಕ್ಕೆ ನಂಬರ್ 81ನೇ ಗೋನ್ಸಾಳ್ ಜಿಯೋ 1 ದಕ್ಷಿಣಕ್ಕೆ ನಂಬರ್ 83ನೇ ಸರ್ಕಾರೀ ಬಿಂಬರ್ ತೋಪಿನ 1 ಪಶ್ಚಿಮಕ್ಕೆ	108	36*	103	1889ನೇ ಇಸವಿ ನವೆಂಬರ್ ತಾರೀಖು 23ನೇ ದಿವಿ 11 ಘಂಟೆ ಲಾಗಾಯತು ಸಾಯಂಕಾಲ 5 ಘಂಟೆ ನಾಗೆ ಕೆಲವರು ತಾಕ್ಷೀದು ಮಾಡಿಕೊಳ್ಳ ಕಛೇರಿಯಿಂದ ಅಮಲ್ದಾರ್‌ನವರ ರೂಬರೂ ಹರಾಜು ನಡಿಸಲ್ಪಟ್ಟಿತ್ತು.

* ಯಕರೆ 5 ಗುಂಟೆ 36 ಖರಾಬ್ ಜಮೀನು ಅಡಗಿಕೊಂಡು ಯಿದೆ.

ತಾರೀಖು 25ನೇ ಫಿಬ್ರವರಿ 1889ನೇ ಇಸವಿ.

ಪಿ. ಎಸ್. ಪೂರ್ಣಯ್ಯ,
ಜಿಲ್ಲೆಟ್ ಕಮ್ಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ತಾರೀಖು 27ನೇ ಫಿಬ್ರವರಿ 1889.

ಸನ್ 1886ನೇ ಇಸವಿ ಎಪ್ರೆಲ್ ತಾರೀಖು 8ರಲ್ಲು ಕೆರೆಹಳ್ಳಿ ಡಿಪೋದಲ್ಲಿ ಹರಾಜುದ ನಾಟುಗಳ ಪೈಕಿ ಸಾಗುವಾನಿ ನಾಟು (17) ಸಾಗುವಾನಿ ಬೆಲಗು 2 ರಫ್ತಾಗದೆ ಇದುವರಿಗೆ ಡಿಪೋದಲ್ಲಿ ಇರುತ್ತದೆ ದರಖಾಸ್ತುದಾರ ಲಕ್ಷ್ಮೀಕಾಂತಕಟ್ಟಯೇ ಆಗಲಿ (ಇವನು ಯೆಲ್ಲಿ ಇದ್ದಾನೋ ಗೊತ್ತಿಲ್ಲ) ಅಥವಾ ಇತರ ಹಕ್ಕುದಾರ್ರೇ ಆಗಲಿ ತಮ್ಮ ಹಕ್ಕನ್ನು ಸಂಪೂರ್ಣವಾಗಿ ಸ್ಥಿರವಡಿಸಿದ ಮೇಲೆ ಡಿಪೋ ಚಾರ್ಜ್ ಅಂದರೆ ಸದರೀ ನಾಟುಗಳಿಗೋಸ್ಕರ ಬರಬೇಕಾದ ಭಾಡಾ ಪಾವತಿಯಿಂದ ಈ ತಾರೀಖು ಲಾಗಾಯತು 30 ದಿನಗಳೊಳಗಾಗಿ ರಫ್ತು ಮಾಡಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ಸದರೀ ಜವ್ವಬೀನೆಯು ಸರ್ಕಾರಕ್ಕೆ ಸಲ್ಲತಕ್ಕ ಹಣವನ್ನು ವಸೂಲ್ ಮಾಡುವ ವುದ್ದಿಶ್ಯ ಹರಾಜ್ ಮಾಡಲ್ಪಡುತ್ತದೆ.

ಇ. ಪಿ. ಲೌರಿ, ಆ|| ಕಲೆಕ್ಟರವೇಟರ್.